ಹೀಗೆ ಪತಿ ಹೇಳಿದ ಮೇಲೆ, ಇನ್ನು ಇವರ ಹತ್ತಿರ ಬಾಲನ್‌ನ ವಿಷಯವನ್ನೇ ಎತ್ತಬಾರದು ಎಂದು ನಿರ್ಧರಿಸಿದ್ದೂ ಆಯಿತು. ಮಗಳಿಗಂತೂ ಅದೊಂದು ತಮಾಷೆಯ ವಿಷಯವೇ ಆಗಿತ್ತು. ಆಗಾಗ, 'ಹೇಗಿದ್ದಾನಮ್ಮ ನಿನ್ನ ಬಾಲನ್... ಫೋನ್ ಮಾಡಿದ್ದನಾ... ಚೆನ್ನೈಗೆ ಬರಬೇಕಂತಾ?' ಎಂದೆಲ್ಲಾ ರೇಗಿಸುತ್ತಿದ್ದಳು.

ಆ ತರಕಾರಿಯಾತ ಹಿಂದಿನ ದಿನ ಹೇಳಿದ್ದಂತೆ ಸುದ್ದಿ ಬಿತ್ತರಿಸಲು ಬಂದಿದ್ದ. ಮೆಲ್ಲಗೆ ಪಿಸುದನಿಯಲ್ಲಿ, 'ಬಾಲನ್ ಮತ್ತೆ ಈ ಊರಿಗೆ ಬರ್ತಾ ಇದ್ದಾನೆ' ಎನ್ನುತ್ತಾ ನನ್ನ ಮುಖ ದಿಟ್ಟಿಸಿದ್ದ. ಒಮ್ಮೆಲೆ ಅಚ್ಚರಿಯೊಂದಿಗೆ ಸಂತಸವೂ ಆಗಿತ್ತು. ಮತ್ತೆ ಹಲವಾರು ಪ್ರಶ್ನೆಗಳೂ ಸುಳಿಯತೊಡಗಿದ್ದವು. ಇಲ್ಲಿಗೆ ಬರುವುದೆಂದರೆ –

ಇಲ್ಲಿಯೇ ತರಕಾರಿ ಅಂಗಡಿಯನ್ನು ಆರಂಭಿಸುತ್ತಾನೇನೊ... ಪ್ರಾಯಶಃ ಹೆಂಡತಿಗೆ ಇಲ್ಲಿಯೇ ಕೆಲಸ ಸಿಕ್ಕಿರಬಹುದು. ಮನೆಯನ್ನು ಬೇರೆಯೇ ಮಾಡುತ್ತಾರೇನೊ... ನಿಮಿಷಾರ್ಧದಲ್ಲಿ ಸುತ್ತುವರೆದ ಪ್ರಶ್ನೆಗಳನ್ನು ಅರಿತವನಂತೆ, 'ಹೆಂಡತಿ ಬರಾಕಿಲ್ಲಂತೆ, ಒಬ್ಬನೇ ಬರಬಹುದು. ಅವರ ಅಣ್ಣ ಹಂಗಂತಂದ,' ಎಂದು ಮರು ನುಡಿದಿದ್ದ.

ಓ ಯಾಕಿರಬಹುದು... ಮನಸ್ಸು ಕಲ್ಪನೆಯ ಕುದುರೆಯನ್ನೇರಿ ಹೊರಟಿತ್ತು. ಮೃದುವಾದ ಯೋಚನೆಯೊಂದು ಕಚಗುಳಿಯಿಡತೊಡಗಿತ್ತು. ಆಕೆಯದು ವಿಶೇಷವಿರಬಹುದು. ಬಾಣಂತನ ಮುಗಿಸಿ ಬರಬಹುದೇನೋ ಅವಳು... ಇಲ್ಲಿಯೇ ಇರುತ್ತಾನೆಂದರೆ ಎಂದಾದರೂ ಈ ಬೀದಿಗೆ ಬಂದೇ ಬಂದಾನು.

ನಮ್ಮಂತೆಯೇ ಅವನಿಗೂ ಅನಿಸದಿದ್ದೀತೆ... ಹೀಗೆಲ್ಲಾ ಯೋಚನೆಗಳು ಬಿಟ್ಟೂಬಿಡದಂತೆ ತಾಕಲಾಡುತ್ತಿದ್ದವು. ಮನಸ್ಸಿನಿಂದ ಕೀಳಲಾರದ ನಂಟು ಬಾಲನ್‌ದು. ಆದಷ್ಟು ಬೇಗ ಹೇಗಾದರೂ ಅವನನ್ನೊಮ್ಮೆ ನೋಡಲೇಬೇಕು... ಮಾತನಾಡಲೇ ಬೇಕು... ಆದರೆ ಹೇಗೆ... ಫೋನ್ ನಂಬರ್ ಇದ್ದಿದ್ದರೆ ಮತ್ತೆಲ್ಲವೂ ಸಾಧ್ಯವಾಗುತ್ತಿತ್ತು... ಈಗೇನೂ ಮಾಡುವಂತಿಲ್ಲ... ಹೋಗಲಿ... ಅವನು ನಮ್ಮನ್ನು ಮರೆತಿದ್ದಾನೆಂದಮೇಲೆ ನಾನೇಕೆ ಅವನಿಗಾಗಿ ಇಷ್ಟು ಪರದಾಡಬೇಕು... ಬಾಲ್ಯದಲ್ಲಿ ಶಾಲೆಯಲ್ಲಿ ಒಟ್ಟಿಗೆ ಒಂದೇ ಬೆಂಚಿನಲ್ಲಿ ಕುಳಿತ ಗೆಳತಿಯರೆಷ್ಟೊ... ಎಂದೂ ಮರೆಯಬಾರದೆಂದು ಮಾತನಾಡಿಕೊಂಡಿದ್ದವರೆಷ್ಟೊ... ಈಗ ಅವರೆಲ್ಲರೂ ಎಲ್ಲಿದ್ದಾರೊ... ಕೆಲವರಂತೂ ವಾಟ್ಸ್‌ಆ್ಯಪ್, ಫೇಸ್‌ಬುಕ್ ಎಂದು ಬಿಟ್ಟುಹೋದ ಸ್ನೇಹದ ನಂಟನ್ನು ಮತ್ತೆ ಕಟ್ಟಿಕೊಳ್ಳುವ ಹವಣಿಕೆಯಲ್ಲಿದ್ದಾರೆ. ಆ ವಿಷಯದಲ್ಲಿಯೂ ನಾನು ತುಸು ಆಲಸಿಯೆ... ಅಥವಾ ಹೊಸ ಸಂಬಂಧದ ಕೊಂಡಿಗಳು ಬಿಗಿಯಾಗಿರುವಾಗ ಮರೆತಿರುವುದು ಮತ್ತೀಗ ಬೇಡವೆನಿಸುತ್ತಿದ್ದಿರಬಹುದು.

★★★

'ಹುರಳಿಕಾಯಿ, ಬೆಂಡೇಕಾಯಿ, ಟೊಮಾಟೊ...' ಎಂಬ ಅಲೆಅಲೆಯಾದ ಸ್ವರ... ಹೌದು... ಅದು ಬಾಲನ್‌ದೇ... ಅನುಮಾನವೇ ಇಲ್ಲ. ಒಂದು ಕ್ಷಣ ವರ್ತಮಾನದ ಅರಿವೇ ಇಲ್ಲದವಳಂತೆ ಬಿಟ್ಟಿದ್ದು ಬಿಟ್ಟಂತೆಯೆ ಹಾಗೆಯೇ ಓಡಿದ್ದೆ. ಸಖೇದಾಶ್ಚರ್ಯದಿಂದ ಬಾಲನ್ ಬಳಿ ಬಂದಿದ್ದೆ. ನನ್ನಂತೆಯೇ ಇನ್ನೂ ಅನೇಕ ಮಂದಿ ಸುತ್ತುವರೆದಿದ್ದೆವು. ಮುಖ ತುಸು ಕಂದಿದಂತೆ, ಒಂದು ಸುತ್ತು ಬಡವಾದಂತೆ, ಹಿಂದಿನ ಆ ಗೆಲುವು ಮುಖದಲ್ಲಿ ಮರೆಯಾದಂತೆ, ಒಟ್ಟಾರೆ ಏನೋ ಸರಿಯಿಲ್ಲವೆ ಎಂಬ ಗುಮಾನಿ... ಅಥವಾ ಅದು ನನ್ನ ಭ್ರಮೆ ಇದ್ದೀತೆ...

'ನೀವೆಲ್ಲಾ ಚೆನ್ನಾಗಿದ್ದೀರಾ ಅಮ್ಮಾವ್ರೆ... ಎಷ್ಟೊಂದು ದಿನಗಳಾದವು ನಿಮ್ಮನ್ನೆಲ್ಲ ನೋಡಿ.'